# ಸ್ವಕೇಂದ್ರಿತ ಮತ್ತು ಪರಕೇಂದ್ರಿತ ನೈತಿಕತೆ

## ಶಿಸ್ತಿನ ಆವಶ್ಯಕತೆ

ಒಂದು ಯಂತ್ರವು ಅದರ ಎಲ್ಲ ಭಾಗಗಳು ಸರಿಯಾಗಿದ್ದು, ನಿಯಮಬದ್ಧವಾಗಿ ತನ್ನ ಹಿಂದಿರುವ ತತ್ತ್ವಕ್ಕೆ ಅನುಸಾರವಾಗಿ ಕೆಲಸ ಮಾಡಿದರೆ ನಾವು ಅದರ ಮೇಲೆ ವಿಶ್ವಾಸವಿಟ್ಟು ನಮ್ಮ ಕೆಲಸಕ್ಕಾಗಿ ಬಳಸುತ್ತೇವೆ. ಹೀಗೆಯೇ ಎಲ್ಲ ವಸ್ತುಗಳ ಕ್ರಿಯೆಗಳೂ ಒಂದು ನಿಯಮ ಬದ್ಧವಾಗಿರುತ್ತವೆ. ಅವುಗಳ ಮೂಲಸ್ವರೂಪ ಮತ್ತು ಲಕ್ಷಣಗಳಿಗೆ ಅನುರೂಪವಾಗಿರುತ್ತವೆ. ನಮ್ಮ ದೇಹವೂ ಕೂಡ ಒಂದು ನಿಯಮ ಬದ್ಧವಾಗಿ, ಪರಸ್ಪರ ಅಂಗಾಂಗಗಳ ಸಹಕಾರದೊಂದಿಗೆ ಕೆಲಸ ಮಾಡುವುದರಿಂದ ನಾವದರಲ್ಲಿ ವಾಸಿಸುವುದು ಸಾಧ್ಯವಾಗಿದೆ. ಹೀಗೆ ಪ್ರಕೃತಿಯಲ್ಲಿ ಎಲ್ಲೆಲ್ಲಿಯೂ ಒಂದು ನಿಯಮಬದ್ಧ ಚಲನೆ, ಸಮಾನತೆ ಇರುವುದರಿಂದ ಇಲ್ಲಿ ಜೀವನ ಸಾಧ್ಯವಾಗಿದೆ.

ಹೀಗೆಯೇ ನಮ್ಮ ವರ್ತನೆಯಲ್ಲಿಯೂ ಶಿಸ್ತು ನಿಯಮಗಳು ಇರಬೇಕಾಗುತ್ತದೆ. ಹಾಗಿಲ್ಲದಿದ್ದರೆ ನಾವು ವಿಶ್ವಾಸಕ್ಕೆ ಅನರ್ಹ ರಾಗುತ್ತೇವೆ, ನಮ್ಮ ಮೇಲಿನ ಶ್ರದ್ಧೆಯನ್ನೂ ಕಳೆದುಕೊಳ್ಳುತ್ತೇವೆ. ಪರಸ್ಪರ ಶ್ರದ್ಧೆ ವಿಶ್ವಾಸಗಳು ಹೊರಟುಹೋಯಿತೆಂದರೆ ಸಾಮಾಜಿಕ ಜೀವನವೇ ಅಸ್ಥಿರವಾಗುತ್ತದೆ, ಎಲ್ಲರ ಜೀವನವೂ ದುಃಖಮಯವಾಗುತ್ತದೆ. ಈ ರೀತಿ ನಮ್ಮ ಜೀವನವನ್ನು ನಿಯಮ ಬದ್ಧವನ್ನಾಗಿಸುವುದೆ, ಶಿಸ್ತುಗೊಳಿಸುವುದೇ ನೈತಿಕತೆ. ಪ್ರಾಮಾಣಿಕರಾಗಿರುವುದು, ಸತ್ಯ ವನ್ನೇ ನುಡಿಯುವುದು, ಕೊಟ್ಟಮಾತಿನಂತೆ ನಡೆದುಕೊಳ್ಳುವುದು, ಇತರರ ಆಸ್ತಿಯನ್ನು ನೇರವಾಗಿಯೊ, ಪರೋಕ್ಷವಾಗಿಯೊ (ವಂಚನೆ ಯಿಂದ) ಕದಿಯದಿರುವುದು, ಇತರರನ್ನು ಯಾವುದೇ ರೀತಿಯಲ್ಲಿಯೂ ಹಿಂಸಿಸದಿರುವುದು, ಇಂದ್ರಿಯನಿಗ್ರಹ—ಇತ್ಯಾದಿ ನೈತಿಕ ಗುಣ ಗಳೆಲ್ಲವೂ ನಾವು ಸಮಾಜದಲ್ಲಿ ಶಾಂತಿಯಿಂದ, ನೆಮ್ಮದಿಯಿಂದ ಸಹಬಾಳ್ವೆ ನಡೆಸುವುದಕ್ಕೆ ಅತ್ಯಂತ ಆವಶ್ಯಕ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೂ ಕೂಡ ಜನರು ಈ ಗುಣಗಳಿಗೆ ಎಷ್ಟು ಅನಾದರ ತೋರಿಸುತ್ತಾರೆ ಎಂಬುದನ್ನು ನೋಡಿದಾಗ ಆಶ್ಚರ್ಯ ವಾಗುತ್ತದೆ. ಈ ಗುಣಗಳ ಕೊರತೆ ಸಮಾಜದಲ್ಲಿ ಇಷ್ಟೊಂದು ಇದ್ದಾಗ್ಯೂ ಸಮಾಜವು ಹೇಗೋ ಇನ್ನೂ ನಡೆದುಕೊಂಡು ಹೋಗು ತ್ತಿರುವುದು ಮತ್ತೂ ಆಶ್ಚರ್ಯ. ಆದರೆ ಈ ಗುಣಗಳ ಕೊರತೆಯಿಂದಾಗಿ ಎಲ್ಲೆಲ್ಲಿಯೂ ಅಶಾಂತಿ ಅಸುಖಗಳು ಕಂಡು ಬರುತ್ತಿರುವುದಂತೂ ನಿಜ.

> **ನಮ್ಮ ವರ್ತನೆಯಲ್ಲಿ ಶಿಸ್ತು ನಿಯಮಗಳು ಇರಬೇಕಾಗುತ್ತದೆ. ಹಾಗಿಲ್ಲದಿದ್ದರೆ ನಾವು ವಿಶ್ವಾಸಕ್ಕೆ ಅನರ್ಹರಾಗುತ್ತೇವೆ, ನಮ್ಮ ಮೇಲಿನ ಶ್ರದ್ಧೆಯನ್ನೂ ಕಳೆದುಕೊಳ್ಳುತ್ತೇವೆ.**

ಈ ನೈತಿಕ ಗುಣಗಳ ಆವಶ್ಯಕತೆ ನಮಗೆಲ್ಲರಿಗೂ ಗೊತ್ತು. ನಾವಾರೂ ಇತರರಿಂದ ವಂಚಿತರಾಗಲು ಇಷ್ಟಪಡುವುದಿಲ್ಲ, ನಾವಾರೂ ಇತರರು ನಮಗೆ ಹಿಂಸಿಸುವುದನ್ನಾಗಲಿ, ಸುಳ್ಳು ಹೇಳುವುದನ್ನಾಗಲಿ ಇಷ್ಟಪಡುವುದಿಲ್ಲ. ಒಬ್ಬ ಅನೈತಿಕ ವ್ಯಕ್ತಿಯೂ ಇತರರೆಲ್ಲರೂ ನೀತಿವಂತರಾಗಿರಬೇಕೆಂದು ಇಷ್ಟಪಡುತ್ತಾನೆ. ಏಕೆಂದರೆ ಇತರರ ಅನೈತಿಕತೆ ತನಗೇ ಕೇಡನ್ನುಂಟುಮಾಡುತ್ತದೆ. ವಿಲ್ ಡ್ಯುರಾಂಟ್ ಹೇಳುತ್ತಾರೆ: 'ಸಾಂಪ್ರದಾಯಿಕ ಪದ್ಧತಿಗಳನ್ನು ಬೋಧಿಸುವುದಕ್ಕಿಂತ ಅನುಸರಿಸುವುದೇ ಜಾಸ್ತಿ; ನೈತಿಕ ಪದ್ಧತಿಗಳನ್ನು ಅನುಸರಿಸುವುದಕ್ಕಿಂತ ಬೋಧಿಸುವುದೇ ಜಾಸ್ತಿ. ಅವು ನಮ್ಮ ನೆರೆಹೊರೆಯವರು ಅನುಸರಿಸ ಬೇಕೆಂದು ನಾವು ಬಯಸುವ ಕರ್ತವ್ಯಗಳು.'

## ಸ್ವಕೇಂದ್ರಿತ ನೈತಿಕತೆ

ಕೆಲವರು ಸಾಂಪ್ರದಾಯಿಕ ನೀತಿ ಸಂಹಿತೆಗಳಿಗೆ ಬದ್ಧರಾಗಿ ನೈತಿಕ ಗುಣಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುತ್ತಾರೆ. ಅವರಿಗೆ ತಾವು ನೀತಿವಂತರಾಗಿರುವುದೇ ಅತ್ಯಂತ ಮುಖ್ಯ, ಇತರರ ಬಗ್ಗೆ ಕಳಕಳಿ ಇರುವುದಿಲ್ಲ. ಅವರು ಯಾವಾಗಲೂ ಸತ್ಯವನ್ನೇ ಹೇಳುತ್ತಾರೆ. ಇತರರಿಗೆ ಅದರಿಂದ ಹಾನಿಯಾಗು ವಂತಿದ್ದರೂ ಅದನ್ನು ಅವರು ಲೆಕ್ಕಿಸು ವುದಿಲ್ಲ. ಅವರ ಪ್ರಾಮಾಣಿಕತೆ ಇತರರಿಗಾಗಿ ಅಲ್ಲ— ತಾನು ಪ್ರಾಮಾಣಿಕನಾಗಿರ ಬೇಕೆಂದು ಮಾತ್ರ. ಅವರು ಒಂದು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರೆ, ಅವರ ಸಹೋದ್ಯೋಗಿಯೊಬ್ಬನು ಏನಾದರೂ ತಪ್ಪನ್ನು ಮಾಡಿದರೆ, ಅದು ಅವರಿಗೆ ತಿಳಿದಿದ್ದರೂ ಮೇಲಧಿಕಾರಿಗೆ ದೂರನ್ನು ಹೇಳುವುದಿಲ್ಲ—ಅದು ಆಫೀಸಿನ ಹಿತದೃಷ್ಟಿಯಿಂದ ಅವಶ್ಯಕವಾದರೂ. ಏಕೆಂದರೆ ತಾವು ಚಾಡಿ ಹೇಳಿದಂತಾಗುತ್ತದೆ ಎಂದು. ಇನ್ನೊಬ್ಬ ವ್ಯಕ್ತಿಯು ಆ ಸಹೋದ್ಯೋಗಿಯ ಮೇಲೆ ದೂರನ್ನು ಹೇಳಿದಾಗ ಇವರಿಗೆ ಅದರಿಂದ ಸಂತೋಷವೇ ಆಗಬಹುದು. ಹಿಂದೂಗಳಾದ ನಮ್ಮಲ್ಲ ನೇಕರು ಮುಸ್ಲಿಮರನ್ನು ಸಾಯಿಸುವುದು ತಪ್ಪು ಎಂದು ತಾವು ಹಿಂದೂ-ಮುಸ್ಲಿಂ ಗಲಭೆಯಲ್ಲಿ ಭಾಗಿಗಳಾಗದಿದ್ದರೂ ಗಲಭೆಯಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಮಡಿದರೆ ಮನಸ್ಸಿನಲ್ಲೇ ಸಮಾಧಾನ ಪಟ್ಟುಕೊಳ್ಳುತ್ತಾರೆ. ಇದು ಮುಸ್ಲಿಮರಿಗೂ ಅನ್ವಯವಾಗುತ್ತದೆ.

ಇಂತಹ ವ್ಯಕ್ತಿಗಳು ನಿಃಸ್ವಾರ್ಥಿಗಳಾಗಿರುವುದೂ ತಾವು ನಿಃಸ್ವಾರ್ಥಿ ಗಳಾಗಿರಬೇಕೆಂಬ ಹುಂಬತನದಿಂದ. ಅವರು ಇತರರಿಗೆ ದಾನ ಮಾಡುವುದೂ ತಾವು ದಾನಿಗಳು ಎಂಬ ಮನಃಸಮಾಧಾನಕ್ಕೋಸ್ಕರ— ಇತರರ ಮೇಲಿನ ಕಳಕಳಿ ಅಲ್ಲಿ ಗೌಣವಾಗಿರುತ್ತದೆ. ತಮ್ಮ ಪಾಲಿಗೆ ಬಂದ ಉಪಯುಕ್ತ ವಸ್ತುವನ್ನಾಗಲಿ, ತಿನ್ನುವ ಪದಾರ್ಥಗಳನ್ನಾಗಲಿ ಅವರು ಇತರರಿಗಾಗಿ ತ್ಯಾಗ ಮಾಡಬಹುದು. ಇದು ತಾವು ನಿಃಸ್ವಾರ್ಥಿ ಗಳಾಗಿರುವುದಕ್ಕಾಗಿಯೇ ಹೊರತು ಇತರರ ಮೇಲಿನ ಪ್ರೀತಿಯಿಂದಲ್ಲ. **'ಗುಣೇ ಖಲಭಯಮ್'** (ಗುಣವಂತನಿಗೆ ತಾನು ಎಲ್ಲಿ ತಪ್ಪುವೆನೊ

